**ಕರ್ನಾಟಕ ವಿಧಾನ ಪರಿಷತ್ತು**

| | | | |
|---|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 2115 |
| 2 | ಸದಸ್ಯರ ಹೆಸರು | : | ಶ್ರೀ ಬಿ.ಕೆ. ಹರಿಪ್ರಸಾದ್ |
| 3 | ಉತ್ತರಿಸುವ ದಿನಾಂಕ | : | 25-03-2021 |
| 4 | ಉತ್ತರಿಸುವವರು | : | ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಹಿರಿಯ ಕೆಂಪೇಗೌಡರ ಸಮಾಧಿ ಸ್ಥಳವಾದ ಕೆಂಪಾಪುರವನ್ನು ಪ್ರವಾಸಿ ಸ್ಥಳವಾಗಿ ಅಭಿವೃದ್ಧಿಗೊಳಿಸಲು ಕ್ರಮ ತೆಗೆದುಕೊಳ್ಳ ಲಾಗುವುದೇ; ಈ ಬಗ್ಗೆ ರೂಪುರೇಷೆಗಳನ್ನು ಸಿದ್ಧಪಡಿಸಲಾಗಿದೆಯೇ; | ಹೌದು.<br><br>ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ಕೆಂಪಾಪುರ ಗ್ರಾಮದಲ್ಲಿರುವ ನಾಡಪ್ರಭು ಕೆಂಪೇಗೌಡರ ವೀರಸಮಾಧಿ ಸ್ಥಳದ ಸಮಗ್ರ ಅಭಿವೃದ್ಧಿಯ ವರದಿ ಸಿದ್ದಪಡಿಸುವ ಸಲುವಾಗಿ ಸರ್ಕಾರಿ ಸ್ವಾಮ್ಯದ M/s iDeCK ಸಂಸ್ಥೆಯನ್ನು ನೇಮಿಸಿ, M/s iDeCK ಸಂಸ್ಥೆಯು ಸಿದ್ದಪಡಿಸಿರುವ ವೀರ ಸಮಾಧಿ ಯೋಜನೆ (Development Plan)ಗೆ ಸರ್ಕಾರದ ಅನುಮೋದನೆ ನೀಡಿದೆ.<br><br>ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ನಅಇ 155 ಎಂಎನ್‌ಜಿ 2020(ಇ), ದಿನಾಂಕ: 08-02-2021ರಲ್ಲಿ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಕೆಂಪಾಪುರದಲ್ಲಿರುವ ಕೆಂಪೇಗೌಡರ ಸಮಾಧಿಯ ನಿರ್ಮಾಣಕ್ಕಾಗಿ ಅವಶ್ಯಕವಿರುವ ಜಾಗವನ್ನು ಭೂಸ್ವಾಧೀನ ಪಡಿಸಿಕೊಳ್ಳಲು, ಪ್ರಾಧಿಕಾರಕ್ಕೆ ಈಗಾಗಲೇ ಬಿಡುಗಡೆಯಾಗಿರುವ ರೂ.100.00 ಕೋಟಿಗಳಲ್ಲಿ, ಭೂಸ್ವಾಧೀನ ವೆಚ್ಚದ ಶೇ.10% ರಷ್ಟು ಮುಂಗಡ ಠೇವಣಿ ರೂ.102.00 ಲಕ್ಷಗಳನ್ನು ಬಳಸಿಕೊಳ್ಳಲು ಸರ್ಕಾರದ ಅನುಮತಿಯನ್ನು ನೀಡಲಾಗಿರುತ್ತದೆ.<br><br>ಅದರಂತೆ, ಈಗಾಗಲೇ ಭೂಸ್ವಾಧೀನ ಪ್ರಕ್ರಿಯೆಗೆ ಮುಂಗಡ ಠೇವಣಿಯನ್ನು ಭೂಸ್ವಾಧೀನಾಧಿಕಾರಿ, ರಾಮನಗರ ಜಿಲ್ಲೆ ರವರಿಗೆ ಬಿಡುಗಡೆಗೊಳಿಸಿ ತುರ್ತು ಕ್ರಮ ಕೈಗೊಳ್ಳಲು ಸೂಚಿಸಲಾಗಿರುತ್ತದೆ. |
| ಆ | ಮಾಗಡಿ ಪಟ್ಟಣದಲ್ಲಿರುವ ಕೆಂಪೇಗೌಡರ ಕಾಲದ ಕೋಟೆಯನ್ನು ಅಭಿವೃದ್ಧಿ ಪಡಿಸ ಲಾಗಿದೆಯೇ; ಇದುವರೆಗೆ ಮುಕ್ತಾಯ ವಾಗಿರುವ ಅಭಿವೃದ್ಧಿ ಕಾಮಗಾರಿಗಳು ಯಾವುವು; ಇನ್ನೂ ಆಗಬೇಕಾಗಿರುವ ಕಾಮಗಾರಿಗಳು ಯಾವುವು; | ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯವು ಅನುಮೋದನೆ ನೀಡಿರುವ ರೂ.486.79 ಲಕ್ಷಗಳ ಕಾಮಗಾರಿಗಳಲ್ಲಿ Site Development Works ನಡಿ ಮಾಗಡಿ ಕೋಟೆಯ ಸಂರಕ್ಷಣಾ ಕಾಮಗಾರಿಯನ್ನು ರೂ.291.17 ಲಕ್ಷಗಳ ವೆಚ್ಚದಲ್ಲಿ ಕೈಗೊಳ್ಳ ಲಾಗುತ್ತಿದ್ದು, ಈ ಕಾಮಗಾರಿಗೆ ರೂ.291.17 ಲಕ್ಷಗಳ ಅನುದಾನವು ಬಿಡುಗಡೆಗೊಂಡಿರುತ್ತದೆ.<br><br>ಈವರೆಗೆ ಕೋಟೆಯ ಉತ್ತರ ಭಾಗದ 138.5 ಮೀಟರ್ ಉದ್ದದ ಗೋಡೆಯ (5.5 ಮೀಟರ್ ಎತ್ತರಕ್ಕೆ) ಸಂರಕ್ಷಣೆಯನ್ನು ಹಾಗೂ ಪಶ್ಚಿಮ ಭಾಗದಲ್ಲಿ 166 ಮೀಟರ್ ಉದ್ದದ ಕೋಟೆಯ ಭಾಗವನ್ನು ಪೂರ್ಣಗೊಳಿಸಲಾಗಿದೆ. ಪೂರ್ವಭಾಗದಲ್ಲಿ 105 ಮೀಟರ್ ಗೋಡೆಯ (3.2 ಮೀಟರ್ ಎತ್ತರಕ್ಕೆ) ಸಂರಕ್ಷಿಸಲಾಗಿದೆ. ಉತ್ತರ ಭಾಗದಲ್ಲಿ 89 ಮೀಟರ್ ಮಣ್ಣಿನ ಅಗೆತ ಹಾಗೂ |

| | | |
|---|---|---|
| | | ತಳಪಾಯವನ್ನು ಭದ್ರಪಡಿಸುವ ಕಾಮಗಾರಿಯನ್ನು ಪೂರ್ಣ ಗೊಳಿಸಲಾಗಿದೆ. ಇದಕ್ಕಾಗಿ ರೂ.260.31 ಲಕ್ಷಗಳ ಅನುದಾನವನ್ನು ವೆಚ್ಚ ಮಾಡಲಾಗಿದೆ.<br><br>ಒಟ್ಟಾರೆ 1028 ಮೀಟರ್ ಕೋಟೆ ಗೋಡೆಯಲ್ಲಿ, 528 ಮೀಟರ್ ಕೋಟೆ ಗೋಡೆ ಸಂರಕ್ಷಣೆ ಪೂರ್ಣಗೊಂಡಿದ್ದು, ಬಾಕಿ 500 ಮೀಟರ್ ಕೋಟೆ ಗೋಡೆ ಸಂರಕ್ಷಣೆಯನ್ನು ಕೈಗೊಳ್ಳುವುದು ಬಾಕಿಯಿರುತ್ತದೆ. ಇದಕ್ಕಾಗಿ ರೂ.570.00 ಲಕ್ಷಗಳ ಅಂದಾಜು ಪಟ್ಟಿಯು ಸಿದ್ಧವಾಗಿದ್ದು, ಪ್ರವಾಸೋದ್ಯಮ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮವಹಿಸಲಾಗುತ್ತಿದೆ. ನಾಡಪ್ರಭು ಕೆಂಪೇಗೌಡರ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮತ್ತು ಪುರಾತತ್ವ ಇಲಾಖೆಯ ಸಂಯೋಗದಲ್ಲಿ ಐಡೆಕ್ ಸಂಸ್ಥೆಯು ನೀಡಿರುವ ಪರಿಕಲ್ಪನಾ ವರದಿಯ ಅನುಸಾರ ಹಾಗೂ ಮುಂದಿನ ಹಂತದಲ್ಲಿ ಸಿದ್ಧಪಡಿಸುವ ವಿಸ್ತೃತ ಯೋಜನಾ ವರದಿಯನ್ನು ಪರಿಶೀಲಿಸಿ, ಸರ್ಕಾರದ ಅನುದಾನದ ಲಭ್ಯತೆಗೆ ಅನುಗುಣವಾಗಿ ಮುಂದಿನ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮ ಜರುಗಿಸಲಾಗುವುದು.<br><br>ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ವತಿಯಿಂದ ಅಭಿವೃದ್ಧಿಗೊಳಿಸುವ 46 ಪಾರಂಪರಿಕ ತಾಣಗಳ ವಿಸ್ತೃತ ಕರಡು ಯೋಜನಾ ವರದಿಯನ್ನು M/s iDeCK ಸಂಸ್ಥೆಯು ಸಿದ್ಧಪಡಿಸಿದ್ದು, 45 ತಾಣಗಳ ಕರಡು ಅಭಿವೃದ್ಧಿ ಯೋಜನೆಯನ್ನು ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಲು ಕ್ರಮ ವಹಿಸಲಾಗುತ್ತಿದೆ. ಸದರಿ ಕರಡು ಯೋಜನಾ ವರದಿಯ ಕ್ರಮ ಸಂಖ್ಯೆ: 08ರಲ್ಲಿ Magadi Fort and Temples ನ ಕರಡು ಯೋಜನಾ ವರದಿಯು ಒಳಗೊಂಡಿರುತ್ತದೆ.<br><br>ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿ, ಅನುಮೋದನೆ ಪಡೆದ ನಂತರ ಕೋಟೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ ಮುಂದಿನ ಕ್ರಮ ವಹಿಸಲಾಗುವುದು. |
| ಇ | ಸಾವನದುರ್ಗ ಪ್ರವಾಸಿ ಕೇಂದ್ರದ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳು ಯಾವುವು; ಸಾವನದುರ್ಗಕ್ಕೆ ಬೆಂಗಳೂರಿ ನಿಂದ ಪ್ರವಾಸಿಗಳ ಅನುಕೂಲಕ್ಕಾಗಿ ನಿಯಮಿತ ಅವಧಿಯಲ್ಲಿ ಕೆಂಪು ಭೋರ್ಡಿನ ಗ್ರಾಮಾಂತರ ನಗರ ಸಾರಿಗೆ ಬಸ್ಸುಗಳನ್ನು ಓಡಿಸಲು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯೊಡನೆ ಸಂಪರ್ಕಿಸಿ ಸೂಕ್ತ ಕ್ರಮ ಜರುಗಿಸಲಾಗುವುದೇ? | ಸಾವನದುರ್ಗ ಪ್ರವಾಸಿ ಕೇಂದ್ರದ ಅಭಿವೃದ್ಧಿಗೆ ಸಂಬಂಧ ಪಟ್ಟಂತೆ ಪರಿಕಲ್ಪನಾ ವರದಿಯ ಅನುಸಾರ ಹಾಗೂ ಮುಂದಿನ ಹಂತದಲ್ಲಿ ಸಿದ್ಧಪಡಿಸುವ ವಿಸ್ತೃತ ಯೋಜನಾ ವರದಿಯಂತೆ ಅನುದಾನದ ಲಭ್ಯತೆಗೆ ಅನುಗುಣವಾಗಿ ಅಭಿವೃದ್ಧಿ ಕಾಮಗಾರಿ ಗಳನ್ನು ಹಂತ ಹಂತದಲ್ಲಿ ಕೈಗೊಳ್ಳಲು ಕ್ರಮ ಜರುಗಿಸಲಾಗುವುದು.<br><br>ಬೆಂಗಳೂರಿನಿಂದ ಸಾವನದುರ್ಗಕ್ಕೆ ಗ್ರಾಮಾಂತರ ನಗರ ಸಾರಿಗೆ ಬಸ್ಸುಗಳನ್ನು ಓಡಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. |

**ಸಂಖ್ಯೆ: ನಅಇ 73 ಬಿಬಿಎಲ್ 2021**

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿಗಳು